17.	ರಾಯಚೂರು	1,80,272
18.	ಶಿವಮೊಗ್ಗ	74,106
19.	ತುಮಕೂರು	1,67,632
20.	ಉತ್ತರ ಕನ್ನಡ	10,168
	ಒಟ್ಟು	19,15,691

ಬೈಂದೂರು ಪುರಸಭೆಯ ನೀರು ಯೋಜನೆ ಮುಗಿಸಲು ಒತ್ತಾಯ

1119 (1915): ಶ್ರೀ ಜಿ.ಎಸ್. ಆಚಾರ್ (ಬೈಂದೂರು):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಗೆ ನಲ್ಲಿ ನೀರು ಪೂರೈಸುವ ಯೋಜನೆಯ ಕಾರ್ಯಾರಂಭ ಯಾವಾಗ ಆಯಿತು, ಅದರ ಅಂದಾಜು ವೆಚ್ಚ ಎಷ್ಟು; ಕೆಲಸ ಮುಗಿಯಬೇಕಾದ ಅವಧಿ ಎಷ್ಟು;

ಆ) ಕೆಲಸ ಮುಗಿಯದೆ ಇರಲು ಕಾರಣವೇನು;

ಇ) ನಲ್ಲಿಗಳನ್ನು ಹಾಕುವಾಗ ಉಪ್ಪು ನೀರು ಪ್ರದೇಶಕ್ಕೆ ಆದ್ಯತೆ ನೀಡುವ ಬದಲು ಇತರ ಸ್ಥಳಗಳಿಗೆ ಪ್ರಾಶಸ್ತ್ಯ ನೀಡಿರುವುದು ಇದೆಯೇ; ಹಾಗಿದ್ದಲ್ಲಿ ಕಾರಣವೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ಜನವರಿ 1991ರಲ್ಲಿ ಯೋಜನೆಯು ಕಾರ್ಯಾರಂಭವಾಯಿತು. ಅಂದಾಜು ವೆಚ್ಚ ರೂ. 40.00 ಲಕ್ಷಗಳು. ನವೆಂಬರ್ 1993ರಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಆ) ಬೈಂದೂರು ನೀರು ಸರಬರಾಜು ಯೋಜನೆಯ ಬಹುತೇಕ ಕಾಮಗಾರಿಗಳು ಮುಗಿದಿದ್ದು, ಅದರಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳು ಬಾಕಿ ಉಳಿದಿರುತ್ತವೆ. ಅವುಗಳೆಂದರೆ ಕೊಳವೆ ಮಾರ್ಗವು ಕೊಂಕಣ ರೈಲ್ವೆ ಮಾರ್ಗವು ಹಾದು ಹೋಗಬೇಕಾದುದ್ದರಿಂದ, ಕೊಳವೆ ಮಾರ್ಗದ ಜೋಡಣೆ ಕಾರ್ಯ ತಡವಾಯಿತು. ಈ ಯೋಜನೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ 9.00 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಾಗಾರ ನಿರ್ಮಾಣದ ಮೊದಲನೆ ಗುತ್ತಿಗೆದಾರರು ಕೆಲಸವನ್ನು ಬಿಟ್ಟು ಹೋದದ್ದರಿಂದ ಎರಡನೇ ಗುತ್ತಿಗೆದಾರರಿಂದ ಉಳಿಕೆ ಕೆಲಸಗಳನ್ನು ಮಾಡಿಸುವುದರಿಂದ ತಡವಾಗಿದೆ.

ಇ) ಇಲ್ಲ.

ರಾಜ್ಯದಲ್ಲಿ ಇರುವ ಪೌರಸಭೆಗಳ ಆರ್ಥಿಕ ಸ್ಥಿತಿ

1120 (2005): ಶ್ರೀ ಬಾಬುರಾವ್ ಚವಾಣ (ಶಹಬಾದ್):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಇರುವ ಪುರಸಭೆಗಳು ಎಷ್ಟು ? ಆರ್ಥಿಕ ರೀತಿಯಲ್ಲಿ ಇರುವುದು ಎಷ್ಟು ಹಾಗೂ ಆರ್ಥಿಕ ಸ್ಥಿತಿ ಸರಿ ಇರಲಾರದು ಎಷ್ಟು;

ಆ) ಪುರಸಭೆಗಳನ್ನು ಆರ್ಥಿಕವಾಗಿ ಸರಿಯಾಗಿ ಮಾಡಲಿಕ್ಕೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು;

ಇ) ಹರಿಜನ ಗಿರಿಜನರೂ 80 ರಷ್ಟು ಜನಸಂಖ್ಯೆ ಇರುವ ಪಟ್ಟಣದಲ್ಲಿ ಇರುವ ಪುರಸಭೆಗಳು ಯಾವುವು ? ಅದಕ್ಕೆ ಸರ್ಕಾರದ ಕಾರ್ಯಕ್ರಮಗಳೇನು;

ಈ) 80 ರಷ್ಟು ಇರುವ ಎಸ್.ಸಿ.ಎಸ್.ಟಿ. ಜನಸಂಖ್ಯೆ ಇರುವ ಪೌರಸಭೆಗಳಿಗೆ ಸರ್ಕಾರದ ವತಿಯಿಂದ ಹೆಚ್ಚಿಗೆ ಏನಾದರೂ ಸಹಾಯಧನ ಕೊಡುವರಾ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ರಾಜ್ಯದಲ್ಲಿ 135 ಪುರಸಭೆಗಳು ಇರುತ್ತವೆ. ಎಲ್ಲಾ ಪುರಸಭೆಗಳು ಆರ್ಥಿಕ ದುಸ್ಥಿತಿಯಲ್ಲಿ ಇರುತ್ತವೆ.

ಆ) ಜಕಾತಿ ಅನುದಾನವನ್ನು ಶೇ. 15ರಷ್ಟು ಹೆಚ್ಚಿಸಲು ನಿರ್ಧರಿಸಿದೆ. ಕರಗಳನ್ನು ವಿಧಿಸಲು ಕರ್ನಾಟಕ ಪುರಸಭೆ ಕಾಯ್ದೆ, 64ರಲ್ಲಿ ಅವಕಾಶ ಮಾಡಿಕೊಡಲಾಗಿದೆ ಕ್ರಮವಾಗಿ ಅಭಿವೃದ್ಧಿ ಅನುದಾನ, ಮನರಂಜನ ತೆರಿಗೆ ಹಾಗೂ ಸ್ಟಾಂಪ್ ಡ್ಯೂಟಿಯಲ್ಲಿ ಭಾಗ ಇತ್ಯಾದಿಗಳನ್ನು ಪಡೆಯಲೆ ಮಾಡಲಾಗುತ್ತಿದೆ.

ಇ) ಯಾವುದೂ ಇರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಕಾರ್ಮಿಕರ ಕನಿಷ್ಠ ವೇತನ

1121 (1969): ಶ್ರೀ ಕ. ಸಿದ್ದಯ್ಯ (ಸಂತೇಮಾರನಹಳ್ಳಿ):-

ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆಯೇ;

ಆ) ಕಾಲ ಕಾಲಕ್ಕೆ ಪರಿಷ್ಕರಿಸಿದ ವೇತನ (ದಿನಾಂಕ ಮತ್ತು ದರಗಳ ಸಹಿತ);

ಇ) ಪ್ರಸ್ತುತ ಚಾಲ್ತಿಯಲ್ಲಿರುವ ಕನಿಷ್ಠ ವೇತನವನ್ನು ಸರ್ಕಾರವು ಲೀವಿಂಗ್ ವೇಜ್ ಎಂದು ಪರಿಗಣಿಸಿದೆಯೆ;

ಈ) ಕೃಷಿ ಕಾರ್ಮಿಕರ ಹಿತಕ್ಕಾಗಿ ಕನಿಷ್ಠ ವೇತನವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನಾದರೂ ಇದೆಯೇ ?

ಶ್ರೀ ಬೈರಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):-

ಅ) ಹೌದು.

ಆ) ಆಯಾ ಕೆಲಸಗಳಿಗನುಗುಣವಾಗಿ ವಿವಿಧ ವರ್ಗಗಳಿಗೆ ವಿವಿಧ ರೀತಿಯ ದರಗಳನ್ನು ನಿಗದಿಪಡಿಸಲಾಗಿದೆ.

ಪ್ರಥಮ ಬಾರಿಗೆ	- 1959	ರೂ.0.50	- ರೂ. 1 75
ಪರಿಷ್ಕರಿಸಿದ್ದು	- 1968	ರೂ 0.75	- ರೂ. 2.55